**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಇವರು ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ: ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿ ಕೃಷ್ಣ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಹಿಪ್ಪರಗಿ ಬ್ಯಾರೇಜ್ ಗೇಟ್ ಕಿತ್ತು ಹೋಗಿ ಸುಮಾರು 5-6 ದಿನಗಳಲ್ಲಿ ಸರಿಸುಮಾರು 2 ರಿಂದ 3 ಟಿ.ಎಂ.ಸಿ ನೀರು ಖಾಲಿಯಾಗಿದೆ, ಸರ್ಕಾರದ ನಿರ್ಲಕ್ಷ್ಯತನದಿಂದ ಈ ಘಟನೆ ಸಂಭವಿಸಿದೆ ಹಾಗೂ ಸದರಿ ಬ್ಯಾರೇಜಿನ ಸಂಪೂರ್ಣ ಗೇಟ್‌ಗಳನ್ನು ದುರಸ್ತಿ ಕಾಮಗಾರಿಯನ್ನು ಈ ಕೂಡಲೇ ಮಾಡುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜನ್ನು ನಿರ್ಮಿಸಲಾಗಿದ್ದು, 6.00 ಟಿಎಂಸಿ ನೀರಿನ ಶೇಖರಣೆ ಸಾಮರ್ಥ್ಯದೊಂದಿಗೆ 22 ವರ್ಟಿಕಲ್ ಕ್ರಸ್ಟ ಗೇಟುಗಳನ್ನು ಹೊಂದಿದೆ.

ದಿನಾಂಕ:06.01.2026 ರಂದು ಹಿಪ್ಪರಗಿ ಬ್ಯಾರೇಜಿನ ಗೇಟ್ ಸಂ.22 ರ ಸರ್ವಿಸ್ ಗೇಟಿನ ಮೇಲಿನಿಂದ 2ನೇ ಎಲಿಮೆಂಟ್ ನೀರಿನ ಒತ್ತಡಕ್ಕೆ ಕಿತ್ತುಹೋದ ನಂತರ ತುರ್ತು ಸ್ಟಾಪ್‌ಲಾಗ್ ಗೇಟುಗಳನ್ನು ದಿನಾಂಕ:09.01.2026 ರಂದು ಅಳವಡಿಸಿ ನೀರಿನ ಹೊರ ಹರಿವನ್ನು ತಡೆಹಿಡಿಯಲಾಗಿರುತ್ತದೆ.

ಜಿಎಲ್‌ಬಿಸಿ ಮತ್ತು ಅದರ ಅಚ್ಚುಕಟ್ಟು ಪ್ರದೇಶವು ಹಿಪ್ಪರಗಿ ಬ್ಯಾರೇಜ್‌ನ ಮೇಲ್ಭಾಗದಲ್ಲಿರುವುದರಿಂದ, ಅಚ್ಚುಕಟ್ಟಿನ Regenerated return ಮೂಲಕ ಹಿಪ್ಪರಗಿ ಬ್ಯಾರೇಜಿಗೆ 450 ಕ್ಯೂಸೆಕ್ಸ್‌ನಷ್ಟು ನೀರಿನ ಒಳಹರಿವು ಇದ್ದು, ಬ್ಯಾರೇಜಿನಲ್ಲಿ 3.75 ಟಿ.ಎಂ.ಸಿ. ನೀರಿನ ಸಂಗ್ರಹಣೆಯಾಗಿದ್ದು, ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. 0.8 ಟಿಎಂಸಿ Dead Storage ಹೊರತುಪಡಿಸಿ 3.00 ಟಿಎಂಸಿ ಉಪಯೋಗವಾಗುವ ನೀರಿನ ಪ್ರಮಾಣವಾಗಿರುತ್ತದೆ. ಫೆಬ್ರವರಿ-2026 ರಿಂದ ಮೇ-2026 ರ ಅಂತ್ಯಕ್ಕೆ ಅಂದಾಜು ಪ್ರತಿ ಮಾಹೆಗೆ ಸುಮಾರು 1.00 ಟಿಎಂಸಿ ನೀರು ಬೇಕಾಗಿದ್ದು, (ಕುಡಿಯುವ ನೀರು, ನೀರಾವರಿ ಮತ್ತು ಕೈಗಾರಿಕೆ) ಒಟ್ಟಾರೆ 5.00 ಟಿಎಂಸಿ ನೀರು ಅವಶ್ಯವಿರುತ್ತದೆ.

ಕರ್ನಾಟಕ ನೀರಾವರಿ (ತಿದ್ದುಪಡಿ) ಅಧಿನಿಯಮ 2024 ಹಾಗೂ ನಿಯಮಾವಳಿಗಳನ್ವಯ ಅನಧಿಕೃತ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ದಿನಾಂಕ:09.01.2026 ರಂದು ಬಾಗಲಕೋಟೆ ಜಿಲ್ಲಾಧಿಕಾರಿ ಹಾಗೂ ಬೆಳಗಾವಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ನಡವಳಿಗಳಂತೆ ಹಿಪ್ಪರಗಿ ಬ್ಯಾರೇಜಿನ ಮೇಲ್ಭಾಗದ ನದಿ ಪಾತ್ರದಲ್ಲಿ ನೀರಾವರಿಗೆ ಬೇಸಿಗೆಕಾಲ ಮುಕ್ತಾಯವಾಗುವವರೆಗೆ ವಿದ್ಯುತ್/ ನೀರಿನ ಹರಿವಿನ ನಿಯಂತ್ರಣ ಸಾಧಿಸಿ ಮುಂದಿನ ದಿನಗಳಲ್ಲಿ ನೀರು ಪೋಲಾಗುವುದನ್ನು ತಡೆಗಟ್ಟಲು ಕ್ರಮ ವಹಿಸಿ ಕುಡಿಯುವ ನೀರಿಗೆ ಹಾಗೂ ರೈತರ ಬೆಳೆ ಸಂರಕ್ಷಿಸಲು ನೀರನ್ನು ಪೂರೈಸಲಾಗುವುದು.

ಹಾನಿಯಾದ ಗೇಟ್ ಸಂಖ್ಯೆ 22ರಲ್ಲಿ, ಹೊಸದಾಗಿ ಗೇಟ್ ಅಳವಡಿಸಲು ದಿನಾಂಕ: 12.01.2026 ರಂದು ರೂ.140.00 ಲಕ್ಷಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದ್ದು, ದಿನಾಂಕ:17.01.2026 ರಂದು ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ವಿಶ್ವಬ್ಯಾಂಕ್ ನೆರವಿನ ಅಣೆಕಟ್ಟು ಪುನಶ್ಚೇತನ ಮತ್ತು ಅಭಿವೃದ್ಧಿ ಯೋಜನೆಯ ಡ್ರಿಪ್ ಅಡಿಯಲ್ಲಿ ಹಿಪ್ಪರಗಿ ಗೇಟ್‌ಗಳ ಬದಲಾವಣೆ ಪ್ರಸ್ತಾವನೆಯು ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಅವಶ್ಯ ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: ಜಸಂಇ 13 ಡಬ್ಲ್ಯೂಎಲ್‌ಎ 2026**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿಗಳು